Salary of teachers undergoing T. C. H. Training

93. Sri N. LOKAYYA NAIK (Virajpet).—

Will the Minister for Education be pleased to state :—

(*a*) whether Government has already issued any orders to the effect that salary from March 1969 would not be paid to the Teachers who are undergoing the one year T. C. H. training;

(*b*) if so, the reasons for issuing such orders?

Sri N. M. KOTRABASAIAH SOGI (Deputy Minister for Education) :—

(*a*) No.

(*b*) Does not arise.

ಶ್ರೀ ಎನ್. ಲೋಕಯ್ಯನಾಯಕ್.—(ಅ)ಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಅವರಿಗೆ ಮಾರ್ಚ್ ತಿಂಗಳ ಸಂಬಳವನ್ನು ಈ ತಿಂಗಳಿನಲ್ಲಿ ಈಗಾಗಲೇ ಕೊಟ್ಟಿದ್ದೀರಾ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ತಿಂಗಳ ಸಂಬಳ ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಹೇಳಿದ ಪ್ರಕಾರ ಅವರಿಗೆ ಸಂಬಳ ಕೊಡಬಾರದು ಎಂಬ ಆದೇಶ ಕೊಟ್ಟಿಲ್ಲ.

ಶ್ರೀ ಎನ್. ಲೋಕಯ್ಯನಾಯಕ್.—30-8-1968ರಂದು ಸರ್ಕಾರದ ಆದೇಶ ಕಳುಹಿಸಿ ಫೆಬ್ರವರಿ ತಿಂಗಳ ಸಂಬಳವನ್ನು ಮಾರ್ಚ್‌ನಲ್ಲಿ ಕೊಡುವ ಹಾಗೆ ಮುಂಜೂರಾತಿ ಕಳುಹಿಸಿದ್ದೀರಿ. ಮಾರ್ಚ್ ತಿಂಗಳಿಂದ ಮುಂದೆ ಪ್ರತಿ ತಿಂಗಳೂ ಸಂಬಳ ಕೊಡುವ ಹಾಗೆ ಆದೇಶ ಕೊಟ್ಟಿದ್ದೀರಾ?

ಶ್ರೀ ಎನ್. ಎಂ. ಕೊಟ್ರಬಸಯ ಸೋಗಿ.—ಮಾನ್ಯ ಸದಸ್ಯರು ಯಾವ ಒಂದು ವಿಷಯವನ್ನು ಹೇಳುತ್ತಾರೋ ಗೊತ್ತಿಲ್ಲ. ನಿರ್ದಿಷ್ಟವಾಗಿ ಇಂಥಾದ್ದು ಎಂದು ನನ್ನ ಗಮನಕ್ಕೆ ತಂದರೆ, ಅದನ್ನು ವಿಚಾರಮಾಡುತ್ತೇನೆ, ಟಿ. ಸಿ. ಎಚ್. ಶಿಕ್ಷಣವನ್ನು ಪಡೆಯುತ್ತಿರುವವರಿಗೆ ಸಂಬಳ ನಿಲ್ಲಿಸುವ ಆದೇಶ ಕೊಟ್ಟಿಲ್ಲ.

ಶ್ರೀ ಎನ್. ಲೋಕಯ್ಯನಾಯಕ್.—ನಿಮ್ಮ ಜಿ. ಓ. 61. ಎಂ. ಟಿ.ಐ. 68 ತಾ॥ 30-8-1968ರ ಪ್ರಕಾರ 2,34,000 ರೂಪಾಯಿಗಳು ಫೆಬ್ರವರಿ ತಿಂಗಳ ಸಂಬಳಕ್ಕೆ ಬೇಕೆಂಬುದಾಗಿ ಡಿ. ಪಿ. ಐ. ಕೇಳಿದಾಗ, 1,98,000 ರೂಪಾಯಿಗಳನ್ನು ಮುಂಜೂರು ಮಾಡಿದ್ದಾರೆ. ಫೆಬ್ರವರಿ ತಿಂಗಳವರೆಗೆ ಸಂಬಳವನ್ನು ಕೊಟ್ಟಹಾಗೆ ಮಾರ್ಚ್ ತಿಂಗಳಿನಿಂದಲೂ ಸಂಬಳ ಕೊಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ಸಂಬಳ ಕೊಡರಾಗುತ್ತದೆ. ರೆಗ್ಯುಲರಾಗಿ ಸ್ಯಾಲರಿ ಕೊಡಲಾಗುತ್ತಿದೆ. ಯಾವುದೇ ತೊಂದರೆ ಇಲ್ಲ. ಅವರು ಹೇಳಿದ ಪ್ರಕಾರ ನಿರ್ದಿಷ್ಟವಾದ ಕಾರಣ ಇರಬಹುದು. ಟಿ. ಸಿ. ಎಚ್. ಟ್ರೈನಿಂಗ್‌ಗೆ ಕಳುಹಿಸುವ ಉದ್ದೇಶದಿಂದ ಸಂಬಳ ಕೊಡಬಾರದೆಂದು ಆದೇಶ ಕೊಟ್ಟಿಲ್ಲ.

ಶ್ರೀ ಎನ್. ಲೋಕಯ್ಯ ನಾಯಕ್.—ಈ ಆರ್ಡರ್‌ನಲ್ಲಿ 2,34,000 ರೂಪಾಯಿಗಳನ್ನು ಡಿ. ಪಿ. ಐ. ಅವರು ಕೇಳಿದ್ದಾರೆ 1,98,000 ರೂಪಾಯಿಗಳನ್ನು ಸರ್ಕಾರದಿಂದ ಮುಂಜೂರು ಮಾಡಿದ್ದಾರೆ. ಇದರಿಂದ ಮುಂದೆ ಆ ಉಪಾಧ್ಯಾರುಗಳು ಸರಿಯಾಗಿ ಸಂಬಳ ಪಡೆದು ಯಾವ ಒಂದು ತಾಪತ್ರಯವೂ ಇಲ್ಲದ ಹಾಗೆ ಏರ್ಪಾಡು ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ತಾಪತ್ರಯ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಮುಂದೆ ಒಂದು ವರ್ಷದ ಕೋರ್ಸು ಇತ್ತು. ಈಗ ಅದನ್ನು ಎರಡು ವರ್ಷಗಳಾಗಿ ಮಾಡಿದೆ. ಸರ್ಕಾರದಲ್ಲಿ ಅದರ ಬಗ್ಗೆ ಲೆಕ್ಕವಾಗುವ ಪ್ರಶ್ನೆ ಇರುವುದರಿಂದ ತಡೆಯಾಗಿರಬಹುದು. ಆ ಜಿ. ಓ. ವನ್ನು ನನ್ನ ಕಛೇರಿಗೆ ಮಾನ್ಯ ಸದಸ್ಯರು ಕಳುಹಿಸಬೇಕು. ಆಗ ಎಲ್ಲವನ್ನೂ ಯೋಚನೆ ಮಾಡಬೇಕಾಗುತ್ತದೆ.

Mr. SPEAKER.—Short Notice Questions are over.